**ಓ ಎಸ್ ನಂಃ 64/2015**
**ಡಿ ಡಬ್ಲ್ಯೂ ಃ 2**

**ದಿಃ 13.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ ಶ್ರೀ ಟಿ ಕೆ ಹೆಚ್ ವಕೀಲರಿಂದ :-

ನಾನು ವಕೀಲ ವೃತ್ತಿಯನ್ನು ಮಾಡುತ್ತೇನೆ ಹಾಗೂ ಪ್ರವೃತ್ತಿಗಾಗಿ ವ್ಯವಸಾಯ ಮಾಡುತ್ತೇನೆ. ಈ ದಾವೆಯನ್ನು ರಂಗಮ್ಮ ಮತ್ತು ಅವರ ಮಗ ಪ್ರತಿವಾದಿಗಳ ವಿರುದ್ಧ ವಿಭಾಗದ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ವಾದಿಗಳು ದಾಸಪ್ಪನ ಪಾಳ್ಯದ ಸರ್ವೆ ನಂ. 51 ಕ್ಕೆ ಸಂಬಂಧಪಟ್ಟಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂ. ನ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ ಕರಿಹನುಮಯ್ಯನವರಿಗೆ ಸೇರಿದ ಸ್ವತ್ತು ಆಗಿರುತ್ತದೆ. ದಾವಾ ಸ್ವತ್ತು ಕರಿಹನುಮಯ್ಯನವರಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತಿನ ಖಾತೆಯು ಈಗಲೂ ಸಹ ಖಾತೆ ಇದೆ ಎಂದರೆ ಲೇಟ್ ಮುದ್ದುಹನುಮಯ್ಯ ಮತ್ತು ಲೇಟ್ ಲೆಂಕಪ್ಪ ರವರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸಾಕ್ಷಿಯು ಕೆಲವೊಂದು ಸ್ವತ್ತುಗಳು ಮುದ್ದಹನುಮಯ್ಯ ಮತ್ತು ಲೆಂಕಪ್ಪ ನವರ ಹೆಸರಿನಲ್ಲಿದ್ದು ಕೆಲವೊಂದು ಸ್ವತ್ತುಗಳು ಖರೀದಿದಾರರ ಹೆಸರಿನಲ್ಲಿದೆ. ಕರಿಹನುಮಯ್ಯನವರಿಂದ ಪ್ರತಿವಾದಿಗಳಿಗೆ ಯಾವುದೇ ಪತ್ರ ವ್ಯವಹಾರ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ಆಕೆಯ ಹೆಂಡತಿ ಮತ್ತು ಪ್ರತಿವಾದಿಗಳ ನಡುವೆ ಆಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖಾತೆಯು ಈ ಹಿಂದೆ ಕರಿಹನುಮಯ್ಯನ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ಆತನ ಹೆಂಡತಿಯ ಹೆಸರಿನಲ್ಲಿತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ಕರಿಹನುಮಯ್ಯನ ಹೆಂಡತಿ ಮರಣ ಹೊಂದಿರುತ್ತಾರೆ. ಕರಿಹನುಮಯ್ಯನವರ ಹೆಂಡತಿಯಾದ ರಂಗಮ್ಮ ನವರ ಹೆಸರಿನಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಪಹಣಿ ಪತ್ರಿಕೆ ಹಾಗೂ ಮ್ಯುಟೇಷನ್ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಯ ಖಾತೆಯು ಕರಿಹನುಮಯ್ಯನ ಹೆಂಡತಿಯಾದ ರಂಗಮ್ಮನವರ ಹೆಸರಿಗೆ ಯಾವತ್ತೂ ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆಯು 1992 ನೇ ಸಾಲಿನ ತನಕ ಕರಿಹನುಮಯ್ಯನ ಹೆಸರಿನಲ್ಲಿದ್ದು, ಆನಂತರ ಇಲ್ಲಿಯ ತನಕ ದಾವಾ ಸ್ವತ್ತಿನ ಖಾತೆಯು ಜಂಟಿಯಾಗಿ ಲೇಟ್ ಮುದ್ದಹನುಮಯ್ಯ ಹಾಗೂ ಲೇಟ್ ಲೆಂಕಪ್ಪನವರ ಹೆಸರಿನಲ್ಲಿದೆ ಎಂದರೆ ಸರಿ. ಪ್ರಸ್ತುತ ವಾದಿಗಳು ಮತ್ತು 1 ನೇ ಪ್ರತಿವಾದಿಯ ವಾರಸುದಾರರು

ಓ ಎಸ್ ನಂಃ 64/2015

ಡಿ ಡಬ್ಲ್ಯೂ ಃ 2

ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆಯು ಕರಿಹನುಮಯ್ಯನವರಿಂದ ಲೇಟ್ ಮುದ್ದಹನುಮಯ್ಯ ಹಾಗೂ ಲೇಟ್ ಲೆಂಕಪ್ಪ ನವರ ಹೆಸರಿಗೆ ಯಾವುದರ ಮುಖೇನ ಖಾತೆ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿ ವ್ಯವಸ್ಥಾ ಪತ್ರದ ಮೂಲಕ ವರ್ಗಾವಣೆಯಾಗಿರುತ್ತದೆ. ಸದರಿ ವ್ಯವಸ್ಥಾ ಪತ್ರದ ದಿನಾಂಕ 20.01.1953. ಸದರಿ ವ್ಯವಸ್ಥಾ ಪತ್ರವು ನೋಂದಣಿಯಾಗಿರುತ್ತದೆ. ದಿಃ 20.01.1953 ರಲ್ಲಿ ಕರಿಹನುಮಯ್ಯನವರು ತಮ್ಮ ಮಕ್ಕಳಿಗೆ ಮಾತ್ರ ವ್ಯವಸ್ಥಾ ಪತ್ರವನ್ನು ಬರೆದಿರುತ್ತಾರೆ ಆದರೆ ಆತನ ಹೆಂಡತಿಯ ಹೆಸರಿಗೆ ಅಲ್ಲ ಎಂದರೆ ಸರಿಯಲ್ಲ. ಸದರಿ ವ್ಯವಸ್ಥಾ ಪತ್ರದ ಒಕ್ಕಣೆಯ ಬಗ್ಗೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**